


ಎಡದಿಂದ ಬಲಕ್ಕೆ:

1. ಬಡವರನ್ನು ಉದ್ಧರಿಸಿದ್ದೇನೆಂದು ಆತನ ಬರೀ ಜಂಭ (4)
3. ಹೊಸದೇ ಆದರೂ ಸ್ವಲ್ಪ ಸಂಶಯ ಇದೆ (3)
4. ಜೊತೆಗೆ ತಂದಿದ್ದನ್ನೇ ಕುರಿತಂತೆ ಭಾರೀ ಜೋಪಾನ (3)
6. ಸಂಪತ್ತಿನ ಪದವಿಗೆ ಏಳು ಹೆಜ್ಜೆ (4)
8. ಗೆಣಸನ್ನು ಕಂಡೊಡನೆ ಮಂದಹಾಸವೇ? (4)
10. ಕಮ್ಮಿ ಏನಿಲ್ಲ, ಆಸೆಬರಿಸುವಂತೆ ಆಕರ್ಷಕವಾಗಿದೆ (4)
12. ಸೇಡು ತೀರಿಸಲು ಬಂದಾತ ಕಂಡದ್ದು ಭಾರೀ ಜಲಪಾತ (4)
16. ವನವಾಸ ಕೈಗೊಳ್ಳಲೂ ತಕ್ಕ ಉಡುಗೆ ಬೇಕಲ್ಲ? (3)
17. ರಾಯರಿಗೆ ಪ್ರಿಯವಾಗಿ ಬೀಸುವ ಗಾಳಿ (3)
18. ಕೆಳಗಿಳಿದು ತೆಗೆದು ಗಳಿಸಿದ್ದು ಬರೀ ನಿಂದನೆ (4)

ಮೇಲಿಂದ ಕೆಳಕ್ಕೆ:

1. ಹಳಬರೇ ಇಲ್ಲಿ ವಿಪರೀತ (3)
2. ರಾಜನ ಕೆಲಸಕ್ಕೆ ಬಂದ ಅಗಸ ಇವನು (3)
3. ಸಂಪತ್ತಿನ ಆಸೆಯಲ್ಲೇ ಮುಳುಗಿದ್ದಕ್ಕೆ ಬರೀ ದುಃಖ (3)
5. ಯೋಗ್ಯತೆಗೆ ಸರಿಯಾಗಿ ನೇಮಿಸಿದವರಿಗೆ ವಂದನೆ ಮಾಡು (3)
6. ಸಂಪರ್ಕ ತೃಪ್ತಿಕರವಾಗಿದೆ (4)
7. ಅವನ ಧ್ವನಿಯ ಸ್ಥಿತಿ ಅನುಕಂಪ ಬರಿಸುವಂತಾಗಿದೆ (4)
8. ವೇತನದ ಜೊತೆಗೇ ಬೆಣ್ಣೆಯೂ ಸಿಕ್ಕಿತೇ? (4)
9. ಗೂಡುಗಳಂತೆ ಸಾಲಾಗಿ 'ಕಡುಬಡವರ ಮನೆ' (4)
11. ವಾನರರೆಲ್ಲ ಖಾಲಿಯಾದ ಮೇಲೆ ಬರೀ ಮೌನ (3)
13. ಗಾರುಡಿಗನ ಕೈಯಲ್ಲಿ ಬಿಳೀಕತ್ತಿನ ಹದ್ದು ತಲೆಕೆಳಗು (3)
14. ಗತ್ತಿನ ಜೊತೆಗೇ ಭಾರವಾದ ಗೌರವ ಕೂಡ (3)
15. ಪೆಕರನ ಕೈಯಲ್ಲಿ ಸ್ವಚ್ಛತಾ ಸಾಧನವೇ? (3)

## ಪದಬಂಧ: 10-2-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪರಾಕ್ರಮ; 3. ವರಾತ; 4. ಹತ್ತಿರ; 6. ನಡೆನುಡಿ; 7. ಆಕರ; 9. ಮುನಿಸು; 11. ಯಯಾತಿ; 13. ಡಮರು; 15. ಕುರವಕ; 17. ಕತ್ತಲು; 18. ಪಾಖಂಡಿ; 19. ಕುರುಕುಲ.

ಮೇಲಿಂದ ಕೆಳಕ್ಕೆ:

1. ಪತನ; 2. ಮಹಡಿ; 3. ವಣಿಕ; 5. ರಜನಿ; 7. ಆಲಯ; 8. ರಸೀತಿ; 9. ಮುಖಂಡ; 10. ಸುಮಾರು; 12. ಯಾಚಕ; 14. ಮಕೆಡಿ ('ಮಡಿಕೆ'ಯನ್ನು ಹೀಗೆ ಮಾಡಿದರೆ ಅರ್ಥ ಇಲ್ಲ); 15. ಕುಲುಕು; 16. ಕಪಾಲ.

# ವಾಸ್ತು ವಿಸ್ಮಯ

## 'ಜಿಗುರಾಟ್' - ಅದೇನು?

ಮಾನವರ ಇತಿಹಾಸದಲ್ಲಿ ಕ್ರಿ.ಪೂ. 3000ದಿಂದ ಕ್ರಿ.ಶ. 1500 ರವರೆಗಿನ 4500 ವರ್ಷಗಳ ಅವಧಿ ಗೋಪುರಾಕಾರದ ಮುಗಿಲೆತ್ತರದ ಅದ್ಭುತ ವಾಸ್ತು ಶಿಲ್ಪಗಳಿಗೆ ತುಂಬ ಪ್ರಸಿದ್ಧ. ಆ ಅವಧಿಯ ಬೇರೆ ಬೇರೆ ಕಾಲಗಳಲ್ಲಿ ಆಗಿನ ಈಜಿಪ್ಟ್, ಮೆಸಪೊಟಾಮಿಯಾ ಮತ್ತು ಮಧ್ಯ ಅಮೆರಿಕ ಪ್ರದೇಶಗಳಲ್ಲಿ ಅರಳಿದ್ದ ನಾಗರಿಕತೆಗಳು ಸಂಪೂರ್ಣ ವಿಭಿನ್ನ ಉದ್ದೇಶಗಳಿಂದ ನಿರ್ಮಿಸುತ್ತಿದ್ದ 'ಪಿರಮಿಡ್ ಶಿಲ್ಪ'ಗಳು ಅವು. ಈಜಿಪ್ಟ್‌ನ ಪಿರಮಿಡ್‌ಗಳು ಆಗಿನ 'ಫೇರೋ' ಅರಸರ ಗೋರಿಗಳಾಗಿದ್ದರೆ ಮಧ್ಯ ಅಮೆರಿಕದ ಪಿರಮಿಡ್‌ಗಳು ನರಬಲಿಯ ಪೀಠಗಳಾಗಿದ್ದುವು. ಹಾಗೆಯೇ 'ದೇವರುಗಳನ್ನು ಧರೆಗೆ ಕರೆತರಲು ಸೋಪಾನ ಮಾರ್ಗಗಳಾಗಿ 'ನಿರ್ಮಾಣಗೊಂಡಿದ್ದ ಮೆಸಪೊಟಾಮಿಯದ ಗೋಪುರ ಶಿಲ್ಪಗಳೇ 'ಜಿಗುರಾಟ್'ಗಳು (ಚಿತ್ರ ನೋಡಿ).

ಪ್ರಾಚೀನ ಮೆಸಪೊಟಾಮಿಯಾದಲ್ಲಿ (ಈಗಿನ ಇರಾಕ್‌ನ ಸುತ್ತಮುತ್ತಲ ಪ್ರದೇಶ) ಟೈಗ್ರಿಸ್ ಮತ್ತು ಯೂಫರೇಟ್ಸ್ ನದಿಗಳ ಆಶ್ರಯದಲ್ಲಿ ಕ್ರಿ.ಪೂ. 3000 ದಿಂದ ಕ್ರಿಸ್ತಶಕಾರಂಭದವರೆಗೆ ಮೂರು ಸಾವಿರ ವರ್ಷ ಅವಧಿಯಲ್ಲಿ ಹಲವಾರು ನಾಗರಿಕತೆಗಳು ಅರಳಿದ್ದುವು: 'ಸುಮೇರಿಯನ್, ಅಸಿರಿಯನ್, ಕಸ್ಸೈಟ್, ಇಲಾಮೈಟ್ ಇತ್ಯಾದಿ.' ಆ ನಾಗರಿಕತೆಗಳು ನಿರ್ಮಿಸಿದ ನಗರಗಳೂ ಹತ್ತಾರು: 'ಯುರ್, ಯುರುಕ್, ಎರಿಡನ್, ಲಗಾಶ್, ನಿಪ್ಪುರ್, ನಿನೇವ್ಹೆ, ಬ್ಯಾಬಿಲಾನ್, ಸೂಸಾ ಮುಂತಾಗಿ.'

ಈ ಎಲ್ಲ ಪ್ರಾಚೀನ ನಗರಗಳಲ್ಲೂ ಎದ್ದು ಕಾಣುತ್ತಿದ್ದ ಪ್ರಮುಖ ಲಕ್ಷಣ ಬೃಹತ್ ಗೋಪುರ ಶಿಲ್ಪಗಳು. ನಗರದ ಕೇಂದ್ರ ಭಾಗದಲ್ಲಿ ಮುಗಿಲನ್ನು ಮುಟ್ಟುವಂತೆ ನಿರ್ಮಿಸಲ್ಪಡುತ್ತಿದ್ದ ಆ ಬಹುಮಡಿ ಕಟ್ಟಡಗಳೇ ಜಿಗುರಾಟ್‌ಗಳು. ಕೇವಲ ಮಣ್ಣು ಮತ್ತು ಬಿಸಿಲಲ್ಲಿ ಬೆಂದ ಇಟ್ಟಿಗೆಗಳಿಂದ ಕಟ್ಟಲಾದ ಆ ಭವ್ಯ ಗಗನಚುಂಬಿ ವಾಸ್ತು ಶಿಲ್ಪಗಳಲ್ಲಿ ಕೆಲವು ಮಾತ್ರ- ಅದೂ ಭಗ್ನಾವಶೇಷಗಳ ರೂಪದಲ್ಲಷ್ಟೇ-



ಈಗ ಕಾಣಲು ಲಭ್ಯ. ಪ್ರಾಚೀನ ಮೆಸಪೊಟಾಮಿಯಾದಲ್ಲಿ ಅರಣ್ಯಗಳಿರಲಿಲ್ಲ, ಬಂಡೆ ನಿಕ್ಷೇಪಗಳೂ ಇರಲಿಲ್ಲ. ಆದ್ದರಿಂದಲೇ ಜಿಗುರಾಟ್‌ಗಳಲ್ಲಿ ಮರ, ಕಲ್ಲುಗಳ ಬಳಕೆ ಕಿಂಚಿತ್ತೂ ಇಲ್ಲ.

ಜಿಗುರಾಟ್‌ಗಳ ನಿರ್ಮಾಣದ ಉದ್ದೇಶ ಏನು?

ಪ್ರಾಚೀನ ಮೆಸಪೊಟಾಮಿಯದ ಧರ್ಮಭೀರು ದೈವಭಕ್ತ ಜನರ ಗಾಢ ನಂಬಿಕೆಯ ಏನಿತ್ತೆಂದರೆ ಅವರ ದೇವ-ದೇವತೆಗಳೆಲ್ಲ ಮನುಷ್ಯ ರೂಪಿಗಳಾಗಿದ್ದು ಆಕಾಶವಾಸಿಗಳಾಗಿದ್ದರೂ ಧರೆಯ ಜನರಲ್ಲಿ ತೀವ್ರ ಆಸಕ್ತಿ ಹೊಂದಿದ್ದರು. ಆ ದೇವರುಗಳಿಗೂ ರಾಗ-ದ್ವೇಷ, ಕೋಪ-ತಾಪ, ಆಸೆ-ಆಕಾಂಕ್ಷೆ ಇತ್ಯಾದಿ ಎಲ್ಲ ಮನುಷ್ಯ ಭಾವಗಳೇ ಮೈಗೂಡಿದ್ದುವು. ಹಾಗಾಗಿ ತಮ್ಮ ಭಕ್ತರನ್ನು ಕಾಣಲು, ಅವರ ಮನೋಭೀಷ್ಟಗಳನ್ನು ಪೂರೈಸಲು ಹಾಗೂ ತಮ್ಮ ಆಸೆಗಳನ್ನೂ ನೆರವೇರಿಸಿಕೊಳ್ಳಲು ಅವರೆಲ್ಲ ಆಗಾಗ ಭೂಮಿಗೆ ಬರಬೇಕಿತ್ತು. ಅದಕ್ಕೆ ನೆರವಾಗಲೆಂದೇ ಸೋಪಾನ ಸಹಿತ ಜಿಗುರಾಟ್‌ಗಳ ನಿರ್ಮಾಣ ನಡೆದಿತ್ತು.

■ ಎನ್.ವಾಸುದೇವ್